## ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು

**ಸಿ.ಸಿ. ನಂ.350/2018**

**ಸಾಕ್ಷಿಃ ಸಿ.ಡಬ್ಲ್ಯೂಃ 2 ಪಿ.ಡಬ್ಲ್ಯೂಃ 2**

| | |
|---|---|
| ಸಾಕ್ಷಿದಾರನ/ಳ ಹೆಸರು | : ಹನುಮಂತ ಬೋವಿ |
| ತಂದೆಯ ಹೆಸರು | : ತಿಮ್ಮಬೋವಿ |
| ವಯಸ್ಸು | : 50 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಬಸವರಾಜಪುರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 28.03.2026.**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ತಾಯಿ. ಚಾಸಾ-3 ರಿಂದ 5 ರವರ ಪರಿಚಯ ಇದೆ. ನನ್ನ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿತರು ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ನನಗೆ ಮತ್ತು ಚಾಸಾ-1 ರವರಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಎಪಿಪಿಯವರಿಂದಃ

ದಿಃ 01.06.2018 ರಂದು ರಾಃ 8.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-1 ರವರು ಮನೆಯ ಹತ್ತಿರ ಇದ್ದಾಗ, 1 ಮತ್ತು 2ನೇ ಆರೋಪಿತರು ಮನೆಯ ಹತ್ತಿರ ಬಂದು ಜಮೀನು ವಿಚಾರವಾಗಿ ಜಗಳ ತೆಗೆದು ನನ್ನನ್ನು ಚಾಸಾ-1 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದರು

ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ಚಾಸಾ–1 ರವರಿಗೆ ಕೈಗಳಿಂದ ಮೈ ಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. 1ನೇ ಆರೋಪಿ ಕಲ್ಲಿನಿಂದ ಚಾಸಾ–1 ರವರ ಎಡಗಣ್ಣಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಆಗ ಅಲ್ಲಿ ಇದ್ದ ಚಾಸಾ–3 ರಿಂದ 5 ರವರು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಚಾಸಾ–1 ರವರನ್ನು ನಾನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಮತ್ತು ಆರೋಪಿತರ ನಡುವೆ ರಾಜಿ ಆಗಿದೆ ಎಂದರೆ ಸರಿ. ರಾಜಿ ಆಗಿರುವ ಕಾರಣ, ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಎಂದು ನುಡಿದಿರುತ್ತಾರೆ.
ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು

**ಸಿ.ಸಿ. ನಂ.**

**ಸಾಕ್ಷಿಃ ಸಿ.ಡಬ್ಲ್ಯೂಃ 2, ಪಿ.ಡಬ್ಲ್ಯೂಃ 1**

| | |
|---|---|
| ಸಾಕ್ಷಿದಾರನ/ಳ ಹೆಸರು | : |
| ತಂದೆಯ ಹೆಸರು | : |
| ವಯಸ್ಸು | : 37 ವರ್ಷ |
| ಉದ್ಯೋಗ | : ಶೇತ್ಕಿ |
| ವಾಸಸ್ಥಳ | : ಮಲಾಬಾದ, ಅಥಣಿ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 21.12.2023**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ಚಾಸಾ1 ಮತ್ತು 3 ರವರ ಪರಿಚಯ ಇರುವುದಿಲ್ಲ. ಈ ಕೇಸಿಗೆ ಸಂಬಂದಿಸಿದಂತೆ 2 ವರ್ಷಗಳ ಹಿಂದೆ ಅಥಣಿ ಪೋಲಿಸರು ನನ್ನನ್ನು ಪೋಲಿಸ ಠಾಣೆಗೆ ಕರೆಯಿಸಿ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡು ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿ.ಪಿ.1 ಎಂದು ಸಹಿಯನ್ನು ನಿ.ಪಿ.1ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಎಪಿಪಿಯವರಿಂದಃ

ದಿ.05.05.2018ರಂದು ಮಧ್ಯಾಹ್ನ 4.00 ಗಂಟೆಗೆ ಚಾಸಾ 1ರವರು ಮತ್ತು ಆರೋಪಿತರಿಗೆ ಜಗಳವಾದ ಸ್ಥಳಕ್ಕೆ ನನ್ನನ್ನು ಕರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಹಲ್ಲೆಗೆ ಉಪಯೋಗಿಸಿದ ಒಂದು ಬಡಿಗೆಯನ್ನು ನನ್ನ ಸಮಕ್ಷಮ ವಶಪಡಿಸಿಕೊಂಡು ಈಗ ಓದಿ ಹೇಳಿದಂತೆ ಪಂಚನಾಮೆಯನ್ನು ಬರೆದು ಓದಿ ಹೇಳಿ ಸ್ಥಳದಲ್ಲಿಯೇ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಷಯ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

4ನೇ ಹೆಚ್ಚುವರಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.